ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) 705

ಆ)

ಕ್ರ ಸಂ	ತಾಲ್ಲೂಕಿನ ಹೆಸರು	ಮಂಜೂರಾತಿ ಕೊಟ್ಟಿರುವ ಸಂಖ್ಯೆ	ಮಂಜೂರಾತಿ ಕೊಡದೆ ಇರುವ ಸಂಖ್ಯೆ
1)	ಗುಲ್ಬರ್ಗಾ	23	130
2)	ಅಫ್‌ಜಲ್‌ಪುರ	40	50
3)	ಅಲಂದ್	13	45
4)	ಜೇವರ್ಗಿ	36	52
5)	ಸೇಡಂ	06	18
6)	ಚಿತ್ತಾಪುರ	17	42
7)	ಜಂಪೋಳಿ	10	30
8)	ಯಾದಗಿರಿ	27	67
9)	ಶಹಪುರ	12	37
10)	ಕೋಶಾಪುರ	20	30
	ಒಟ್ಟು	204	501

ಇ) ಪಟ್ಟಣ ಪ್ರದೇಶದಲ್ಲಿ ಕನಿಷ್ಟ ಮಿತಿ 500 ಪಡಿತರ ಚೀಟಿಗಳು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕನಿಷ್ಠ ಮಿತಿ 300 ಪಡಿತರ ಚೀಟಿಗಳು ಲಭ್ಯವಿದ್ದಲ್ಲಿ ಮಾತ್ರ ನ್ಯಾಯ ಬೆಲೆ ಅಂಗಡಿ ಮಂಜೂರಾತಿ ನೀಡಲು ಅವಕಾಶವಿದೆ. ಸರ್ಕಾರ ರೂಪಿಸಿದ ನಿಯಮಗಳ ಪ್ರಕಾರ ಆದ್ಯತೆಯ ಮೇರೆಗೆ ಅಂದರೆ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ, ಸಹಕಾರಿ ಸಂಘ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಇತ್ಯಾದಿಗಳಿಗೆ ಪ್ರಾಧಿಕಾರ ನೀಡಬೇಕಾಗುತ್ತಿದೆ. ಈ ನಿಯಮಗಳನ್ನು ಪಾಲಿಸಿದಾಗ ನ್ಯಾಯ ಬೆಲೆ ಅಂಗಡಿಗಾಗಿ ಕೋರಿ ಬಂದ ಎಲ್ಲಾ ಅರ್ಜಿಗಳನ್ನು ಪರಿಗಣಿಸಲು ಸಾಧ್ಯವಿಲ್ಲವಾಗಿರುತ್ತದೆ.

ಈ) ಸರ್ಕಾರದ ಆದೇಶ ಸಂಖ್ಯೆ : ಎಫ್.ಟಿಡಿ. 338 . ಡಿಆರ್‌ಎ. 91 ದಿ. 19-3-92ರ ಆದೇಶದಲ್ಲಿ ತಿಳಿಸಿರುವಂತೆ ಹರಿಜನ ಮತ್ತು ಗಿರಿಜನರಿಗೆ ಶೇ. 20ರಂತೆ ಪ್ರಾಧಿಕಾರ ನೀಡಬೇಕಾಗಿದ್ದು, ಏಪ್ರಿಲ್ 1992ರಿಂದ ಈ ವರೆವಿಗೂ ಒಟ್ಟು 52 ನ್ಯಾಯ ಬೆಲೆ ಅಂಗಡಿ ಮಂಜೂರಾತಿ ಮಂಜೂರು ಮಾಡಲಾಗಿದ್ದು ಇದರಲ್ಲಿ 14 ನ್ಯಾಯ ಬೆಲೆ ಅಂಗಡಿಗಳನ್ನು ಹರಿಜನ ಗಿರಿಜನರಿಗೆ ಮಂಜೂರು ಮಾಡಲಾಗಿದೆ.

ಉ) ಲಭ್ಯವಿರುವ ಹಾಗೂ ಹೆಚ್ಚುವರಿಯಾದ ಪಡಿತರ ಚೀಟಿಗಳ ಆಧಾರದ ಮೇಲೆ ಹೊಸ ನ್ಯಾಯ ಬೆಲೆ ಅಂಗಡಿಯ ಮಂಜೂರಾತಿ ನೀಡಬೇಕಾಗುತ್ತದೆ.

ಬಸ್ ಪ್ರಯಾಣದ ದರವನ್ನು ಇಳಿಸುವ ಬಗ್ಗೆ

390 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಈಗಿರುವ ಬಸ್ ಪ್ರಯಾಣ ದರವನ್ನು ಕಡಿಮೆ ಮಾಡಲು ಸರ್ಕಾರವು ನಿರ್ಧರಿಸಿದೆಯೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲ

ಸಾರಿಗೆ ಇಲಾಖೆ ಚುರುಕುಗೊಳಿಸುವಲ್ಲಿ ತೆಗೆದುಕೊಂಡ ಕ್ರಮ

391 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಾರಿಗೆ ಇಲಾಖೆಯನ್ನು ಚುರುಕುಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) 1) ಕೌಂಟರ್ ಪದ್ಧತಿಯನ್ನು ಎಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಹಾಗೂ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳಲ್ಲಿ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ಜಾರಿಗೆ ತರಲಾಗಿದೆ.

2) ಪ್ರತಿಯೊಂದು ಕಛೇರಿಗೆ ಬರುವ ಸಾರ್ವಜನಿಕರಿಗೆ ಸೂಕ್ತ ಮಾರ್ಗದರ್ಶನ ನೀಡಲು ಸ್ವಾಗತಕಾರರನ್ನು ನಿಯೋಜಿಸಲಾಗಿದೆ.

3) ತೆರಿಗೆ ಪಾವತಿಸುವುದನ್ನು ತಪ್ಪಿಸಿಕೊಳ್ಳುವವರ ವಿರುದ್ಧ ಕ್ರಮ ಕೈಗೊಳ್ಳಲು ಹಾಗೂ ಮೋಟಾರು ವಾಹನ ಕಾಯ್ದೆ 1988 ಮತ್ತು ನಿಯಮಾವಳಿಗಳನ್ನು ಜಾರಿಗೆ ತರುವ ಸಲುವಾಗಿ ಇನ್ನೂ ಹೆಚ್ಚಿನ ತಪಾಸಣಾ ಕೇಂದ್ರಗಳನ್ನು ತೆರೆಯಲಾಗಿದೆ.

4) ಕಲಿಕೆ ಅನುಜ್ಞಾ ಪತ್ರಗಳನ್ನು ನೀಡುವ ಸಲುವಾಗಿ ಬೆಂಗಳೂರಿನಲ್ಲಿರುವ ಉತ್ತರ, ದಕ್ಷಿಣ, ಪೂರ್ವ ಕೇಂದ್ರ ಕಛೇರಿಗಳಲ್ಲಿ ಮತ್ತು ಧಾರವಾಡ, ಮೈಸೂರು ಮಂಗಳೂರು ಕಚೇರಿಗಳಲ್ಲಿ ಗಣಕ ಯಂತ್ರಗಳನ್ನು ಪ್ರಾರಂಭಿಸಲಾಗಿದೆ.

5) ಮೋಟಾರು ವಾಹನ ಕಾಯ್ದೆ ಹಾಗೂ ನಿಯಮಗಳನ್ನು ಜಾರಿಗೆ ತರಲು ರಾಜ್ಯದ ಸಾರಿಗೆ ಇಲಾಖೆಯನ್ನು ಉತ್ತರ ಹಾಗೂ ದಕ್ಷಿಣ ಎಂಬ ಎರಡು ವಲಯಗಳನ್ನಾಗಿ ವಿಂಗಡಿಸಲಾಗಿದೆ. ಜಂಟಿ ಸಾರಿಗೆ ಆಯುಕ್ತರು (ಉತ್ತರ) ಹಾಗೂ ಜಂಟಿ ಸಾರಿಗೆ ಆಯುಕ್ತರು (ದಕ್ಷಿಣ) ಎಂಬ ಎರಡು ಹುದ್ದೆಗಳನ್ನು ಸೃಷ್ಟಿಸಿ ಪ್ರವರ್ತನ ಕೆಲಸವನ್ನು ಇವರಿಗೆ ವಹಿಸಲಾಗಿದೆ.

6) ಕಳೆದ ವರ್ಷ ಸರ್ಕಾರವು ಹೆಚ್ಚಿಗೆ ಕಾರ್ಯಕಾರಿ ಹಾಗೂ ಲಿಪಿಕ ನೌಕರರ ನೇಮಕಾತಿಗೆ ಮಂಜೂರಾತಿ ನೀಡಿದೆ. ಇದರಿಂದಾಗಿ ತ್ವರಿತವಾಗಿ ದಕ್ಷತೆ ಯಿಂದ ಇಲಾಖೆಯ ಕೆಲಸಗಳನ್ನು ಸಾಗಲು ಅನುಕೂಲವಾಗಿದೆ.

7) ತಾಲ್ಲೂಕು ಕೇಂದ್ರ ಸ್ಥಳಗಳಲ್ಲಿ ವಾಹನಗಳ ತಪಾಸಣೆ ನಡೆಸಿ ವಾಹನದ ಅರ್ಹತಾ ಪತ್ರಗಳನ್ನು ನೀಡಲು ಹಾಗೂ ವಾಹನ ಚಾಲಕರ ಅನುಜ್ಞಾ ಪತ್ರಗಳ ಬಗ್ಗೆ ಪರೀಕ್ಷೆ ನಡೆಸಲು ನಿಗಧಿತ ದಿನಗಳಂದು ಕಾರ್ಯಕಾರಿ ಸಿಬ್ಬಂದಿಯನ್ನು ತಾಲ್ಲೂಕು ಕೇಂದ್ರಗಳಿಗೆ ಕಳುಹಿಸುವಂತೆ ಎಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಹಾಗೂ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.